# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್ ಎನ್. ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ

ಸೂಚನೆ:-

ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಆಲ್ದೂರು ಹೋಬಳಿ, ಕೆಳಗೂರು ಗ್ರಾಮದ ಸ ನಂ 113/3ರಲ್ಲಿ ಹಾದು ಹೋಗುವ ಸರ್ಕಾರಿ ಗ್ರಾಮ ನಕ್ಷೆಗೆ ಒಳಪಟ್ಟಿರುವ ರಸ್ತೆಯು ಕೆಳಗೂರು ಗ್ರಾಮ, ಮಡೆನೆರಲು ಹಾಗೂ ಆಲ್ದೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ಸದರಿ ಗ್ರಾಮಗಳಿಗೆ ಹಾಗೂ ಕೆಳಗೂರು ಗ್ರಾಮದ ದೇವೀರಮ್ಮ ದೇವಸ್ಥಾನಕ್ಕೆ ಹಾಗೂ ಸ್ಮಶಾನಗಳಿಗೆ ಹೋಗಲು ಸ್ಥಳೀಯರು ಅನಾದಿ ಕಾಲದಿಂದಲೂ ಸದರಿ ರಸ್ತೆಯನ್ನೇ ಬಳಕೆ ಮಾಡುತ್ತಿದ್ದು, ಈಗ ಸದರಿ ಸರ್ವೆ ನಂ ನಲ್ಲಿರುವ ಜಮೀನಿನ ಮಾಲಿಕರು ಸದರಿ ಸರ್ಕಾರಿ ಗ್ರಾಮ ನಕ್ಷೆಗೆ ಒಳಪಟ್ಟಿರುವ ರಸ್ತೆಯನ್ನು ಅನಧಿಕೃತ ವಾಗಿ ಒತ್ತುವರಿ ಮಾಡಿಕೊಂಡು ಬೇಲಿ ಹಾಕುವ ಮೂಲಕ ಸಾರ್ವಜನಿಕರಿಗೆ ಅನಾನುಕೂಲ ಮಾಡಿದ್ದಲ್ಲದೇ ಸ್ಥಳೀಯರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಬೆದರಿಕೆ ಒಡ್ಡುತ್ತಿದ್ದು, ಇದರಿಂದಾಗಿ ಸ್ಥಳೀಯರಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಗೆ ದೇವಸ್ಥಾನಕ್ಕೆ, ಸ್ಮಶಾನಕ್ಕೆ ಹಾಗೂ ಸುತ್ತಲಿನ ಗ್ರಾಮ ಗಳಿಗೆ ಹೋಗಲು ತೀರಾ ಅನಾನುಕೂಲವಾಗಿ ತೊಂದರೆ ಅನುಭವಿಸುತ್ತಿದ್ದು, ಒತ್ತುವರಿ ಮಾಡಿಕೊಂಡಿರುವ ರಸ್ತೆಯನ್ನು ತೆರವು ಗೊಳಿಸಿ ಗ್ರಾಮಸ್ಥರಿಗೆ ಹಾಗೂ ಸ್ಥಳೀಯರಿಗೆ ಸುಗಮ ಸಂಚಾರಕ್ಕೆ ಅವಕಾಶ ನೀಡುವ ಕುರಿತು.

ಉತ್ತರ:-

ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ಕೆಳಗೂರು ಗ್ರಾಮದ ಸ ನಂ 113/3 ರಲ್ಲಿ ಇರುವ ನಕಾಶೆ ದಾಖಲೆಗಳ ರಸ್ತೆಯನ್ನು ಮುಚ್ಚಿದ್ದು, ಇದನ್ನು ತೆರವುಗೊಳಿಸಿಕೊಡುವಂತೆ ಶ್ರೀ ದಯಾಕರ ಎಂ ಆರ್ ಬಿನ್ ರಾಮೇಗೌಡ ಎಂಬುವವರು ದಿನಾಂಕ 05-07-2025 ರಂದು ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಪಹಣಿ ಪರಿಶೀಲನೆಯಂತೆ ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ಕೆಳಗೂರು ಗ್ರಾಮದ ಸ ನಂ 113 ರಲ್ಲಿ ಒಟ್ಟು 5 ಹಿಸ್ಸಾಗಳಿದ್ದು ಈ ಪೈಕಿ 113/2 ರಲ್ಲಿ 0.03 ಗುಂಟೆ ಹಾಗೂ 113/3 ರಲ್ಲಿ 0.06 ಗುಂಟೆ ಬ ಖರಾಬು ದಾಖಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಹಿಡುವಳಿ ಸರ್ವೆ ನಂಬರ್‌ನಲ್ಲಿರುವ ಖರಾಬು ವಿಸ್ತೀರ್ಣದ ಬಗ್ಗೆ ಟಿಪ್ಪಣಿ/ ಖರಾಬು ಉತಾರು ದಾಖಲೆಯನ್ನು ಪರಿಶೀಲಿಸಿ ನಕಾಶೆ ಕಂಡ ದಾರಿ ಇರುವ ಬಗ್ಗೆ ಹಾಗೂ ಒತ್ತುವರಿ ಮಾಡಿರುವ ಬಗ್ಗೆ ತಾಲ್ಲೂಕು ಭೂಮಾಪಕರು ಸಿದ್ಧಪಡಿಸಿರುವ ಸರ್ವೆ ನಕ್ಷೆಯಂತೆ 0.06 ಗುಂಟೆ ಬ ಖರಾಬು ಇರುತ್ತದೆ. ಈ ಪೈಕಿ 0.03 ಗುಂಟೆ ಕಾಲು ದಾರಿ ಹಾಗೂ 0.03 ಗುಂಟೆ ಹಳ್ಳದ ಖರಾಬು ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಅನಧಿಕೃತವಾಗಿ ಒತ್ತುವರಿ ಮಾಡಿ ಭೌತಿಕವಾಗಿ ಮುಚ್ಚಿರುವ ಕುರಿತು ಒತ್ತುವರಿ ಮಾಡಿರುವ ಜಮೀನನ್ನು ಸ್ವಯಂಪ್ರೇರಣೆಯಿಂದ ತೆರವುಗೊಳಿಸುವ ಬಗ್ಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಕಲಂ 104 ರನ್ವಯ ದಿನಾಂಕ:14-08-2025 ರಂದು ಸಂಬಂಧಪಟ್ಟ ಒತ್ತುವರಿದಾರರಿಗೆ ಹೊರ ದೂಡುವ ನೋಟೀಸ್ ನೀಡಲಾಗಿರುತ್ತದೆ.

(ಆರ್‌ಡಿ 54 ಎಲ್‌ಜಿಯು 2025)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು